ಅಮ್ಮಾಚನ್ ಈ ಎಲ್ಲಾ ವಿಷಯಗಳಿಂದ ದೂರವಾಗಿ, ಆಕಾಶದೆಡೆಗೆ ನೋಡುತ್ತಾ ಕುಂಜಮ್ಮಾರಿಗೆ ಹೇಳಿದರು, 'ಪರ್ವಾಗಿಲ್ಲ... ಅವರೊಂದಿಗೆ ಅವರ ದೇವರಿದ್ದಾನೆ.'

'ಏನು ಮಾಡುವುದು?' ಕುಂಜಮ್ಮಾ ನಿಟ್ಟುಸಿರು ಬಿಡುತ್ತಾ ಹೇಳಿದರು, 'ಇದರಲ್ಲಿ ಯಾರ ದೋಷವೂ ಇಲ್ಲ. ಎಲ್ಲಾ ನಮ್ಮ ದುರದೃಷ್ಟ... ನಾನೇನಾದರೂ ಹೇಳಿದರೆ, ನಾನು ನಿಮ್ಮ ಪರಿವಾರದಲ್ಲಿ ತಲೆ ಹಾಕುತ್ತಿದ್ದೇನೆ ಅಂತ ತಿಳಿಯುವಿರಿ. ನೀವು ನನ್ನ ಒಳ್ಳೆಯತನ ಮತ್ತು ಶುಭ ಚಿಂತನೆಯನ್ನು ಅರ್ಥ ಮಾಡಿಕೊಳ್ಳಲಿಲ್ಲ... ನೀವು ನಿಮ್ಮ ಕುಂಜಮ್ಮಾಳನ್ನು ಎಂದೂ ಅರ್ಥ ಮಾಡಿಕೊಳ್ಳಲು ಸಾಧ್ಯವಾಗಲೇ ಇಲ್ಲ.'

'ಅವಳಿಗೂ ಸಹ ನನ್ನ ಶುಭ ಚಿಂತನೆಯನ್ನು ಅರ್ಥ ಮಾಡಿಕೊಳ್ಳಲಾಗಲಿಲ್ಲ' ಎಂದ ಪಾಲ್.

'ಯಾರು? ನೀನಾ?'

'ಹೌದು, ನಾನು ಅವಳ ಹೆಣ್ಣುಮಕ್ಕಳಿಗೆ ಒಳ್ಳೆಯ ತಂದೆಯಾಗಲು ಬಯಸಿದೆ. ಅವರ ಬಗ್ಗೆ ಯೋಚಿಸಿದೆ, ಅವರಿಗೆ ಮಾರ್ಗದರ್ಶನ ಮಾಡಲು ಬಯಸಿದೆ. ಆದರೆ ನನ್ನ ಶುಭಚಿಂತನೆಯನ್ನು ಅವಳ ಮಕ್ಕಳು ಇಷ್ಟಪಡಲಿಲ್ಲ, ಅವರ ತಾಯಿ ನೀನಾ ಸಹ ಇಷ್ಟಪಡಲಿಲ್ಲ.'

'ಸಂಬಂಧಗಳ ಸಮಸ್ಯೆ ಮತ್ತು ಗಡಿರೇಖೆಯನ್ನು ಅರ್ಥ ಮಾಡಿಕೊಳ್ಳುವುದು ಸದಾ ಸುಲಭವಲ್ಲ. ಸಂಬಂಧಗಳ ಬಗ್ಗೆ ನಮ್ಮ ಉತ್ಸಾಹ ಮತ್ತು ಶುಭ ಚಿಂತನೆ ಸದಾ ಸುಖಕರವಾಗಿರುವುದಿಲ್ಲ.'

ನಾನು ಮನೆಗೆ ಮರಳಿ ಬಂದೆ. ಅಪ್ಪ ತಮ್ಮ ಇಷ್ಟದ ಕುರ್ಚಿಯಲ್ಲಿ ಕೂತು, ಕಣ್ಣುಗಳಿಗೆ ಕನ್ನಡಕ ಹಾಕಿಕೊಂಡು, ಎದುರಿಗಿನ ಮಣೆಯ ಮೇಲಿದ್ದ ಬೈಬಲ್ ಪುಟಗಳನ್ನು ತೆರೆದು ಓದುತ್ತಿದ್ದರು. ನಾನು ಅಡುಗೆ ಮಾಡಲಾರಂಭಿಸಿದೆ. ಅಪ್ಪ ಬೈಬಲ್ ಓದಿ ಮುಗಿಸಿದಾಗ ಅವರಿಗೆ ಹೇಳಿದೆ, 'ಕುಂಜಮ್ಮಾರ ಮನೆಗೆ ಹೋಗಿದ್ದೆ. ಅವರ ಪತಿ ಒಂದು ಮಗುವಾಗಿದ್ದಾರೆ. ಕುಂಜಮ್ಮಾ ಅವರನ್ನು ತುಂಬಾ ಚೆನ್ನಾಗಿ ಆರೈಕೆ ಮಾಡುತ್ತಿದ್ದಾರೆ.'

'ಹೂಂ, ಅವಳು ತನ್ನ ಪತಿಯ ಸೇವೆಯನ್ನು ಮನಸಾರೆ ಮಾಡುತ್ತಿದ್ದಾಳೆ ಎಂದು ಜನರು ಹೇಳುವುದನ್ನು ನಾನೂ ಕೇಳಿದ್ದೇನೆ.'

'ನೀವೇಕೆ ಅಮ್ಮಾಚನ್‌ರನ್ನು ನೋಡಲು ಹೋಗಲಿಲ್ಲ? ಈ ಬಗ್ಗೆ ಕುಂಜಮ್ಮಾ ನಿಮ್ಮ ಬಗ್ಗೆ ದೂರು ಹೇಳಿದರು.'

'ಏನು ಹೇಳಿದಳು?'

'ನೀವು ಅಂಥ ಗಂಡಾಂತರದಲ್ಲೂ ಅವರ ಬಳಿಗೆ ಬಂದು ಅವರ ಕ್ಷೇಮ ಸಮಾಚಾರವನ್ನು ಕೇಳಲಿಲ್ಲ, ಫೋನ್ ಸಹ ಮಾಡಲಿಲ್ಲ ಎಂದರು.'

'ಏನು ಮಾಡಲಿ? ನಾನು ಅವಳ ಮನೆಗೆ ಹೋದಾಗಲೆಲ್ಲಾ ಜಗಳ ಮಾಡ್ತಾಳೆ. ನನಗೆ ಅವಳನ್ನು ನೋಡಿದರೆ ಭಯವಾಗುತ್ತೆ. ನಿನ್ನ ಅಮ್ಮನನ್ನು ನಾನು ಕೊಂದೆ, ನಾನು ಅವಳ ಚಿಕಿತ್ಸೆಯನ್ನು ಸಮಯಕ್ಕೆ ಸರಿಯಾಗಿ ಮಾಡಿಸಲಿಲ್ಲ, ನಾನು ನೀಲ್‌ನನ್ನು ಕೊಂದೆ. ಅವನನ್ನು ದೊಡ್ಡ ಆಸ್ಪತ್ರೆಗೆ ಕರೆದೊಯ್ಯುವುದಕ್ಕೆ ಬದಲು ಒಂದು ಸಣ್ಣ ನರ್ಸಿಂಗ್ ಹೋಮ್‌ಗೆ ಸೇರಿಸಿದೆ ಎಂದೆಲ್ಲಾ ಆರೋಪವನ್ನು ಹೊರಿಸುತ್ತಾಳೆ. ಹೀಗೆ ನನ್ನೊಂದಿಗೆ ಜಗಳವಾಡಲು ಅವಳ ಹತ್ರ ಅನೇಕ ವಿಷಯಗಳಿವೆ. ಕಡೆಗೆ ನಾನು ಸೋತು ಅವಳ ಮನೆಗೆ ಹೋಗುವುದನ್ನು ಬಿಟ್ಟೆ.'

'ಅದೇನೇ ಇರಲಿ, ನೀವು ಅವರ ಪತಿಯನ್ನು ನೋಡಲು ಖಂಡಿತ ಹೋಗಬೇಕಿತ್ತು. ನಾವು ಕುಂಜಮ್ಮಾ ಮಾಡಿದ ತ್ಯಾಗವನ್ನು ಮರೆಯಲೇ ಬಾರದು. ಕುಂಜಮ್ಮಾ ತಮ್ಮ ಜೀವನದಲ್ಲಿ ತುಂಬಾ ಒಳ್ಳೆಯ ಕೆಲಸವನ್ನು ಮಾಡಿದ್ದಾರೆ. ಅಮ್ಮನಿಗೆ ಕ್ಯಾನ್ಸರ್ ಆದಾಗ, ಅವರೇ ನೋಡಿಕೊಂಡರು. ಅಜ್ಜಿಯ ಜವಾಬ್ದಾರಿಯನ್ನೂ ಅವರೇ ಹೊತ್ತರು.'

'ಅಜ್ಜಿ ತಮ್ಮೆಲ್ಲಾ ಆಸ್ತಿಯನ್ನೂ ತಮ್ಮ ಕಿರಿಯ ಮಗಳಿಗೆ ಕೊಟ್ಟರು' ಅಪ್ಪ ನನ್ನನ್ನು ಕೂಡಲೇ ತಡೆದರು.

'ಅಜ್ಜಿಯ ಹತ್ರ ಆಸ್ತಿಯಾದರೂ ಎಷ್ಟಿತ್ತು? ಹಳ್ಳಿಯಲ್ಲಿದ್ದ ಒಂದು ಮನೆ, ಅಷ್ಟೆ. ಅದನ್ನು ಅವರು ಮಾರಿ ಹಣವನ್ನು ಕುಂಜಮ್ಮಾರಿಗೆ ಕೊಟ್ಟಿದ್ದರು. ಅಲ್ಲದೆ, ಅವರು ಕುಂಜಮ್ಮಾರ ಮನೆಯಲ್ಲಿಯೇ ಇದ್ದರು...'

ನಿನ್ನ ಅಮ್ಮ ಹೋದ ನಂತರ ಅಜ್ಜಿ ನಮ್ಮ ಮನೆಗೆ ಬರುವುದನ್ನು ನಿಲ್ಲಿಸಿದ್ದರು. ಅಮ್ಮ–ಮಗಳು ಇಬ್ಬರು ಸೇರಿ, 'ನಾನು ನಿನ್ನ ಅಮ್ಮನ ಚಿಕಿತ್ಸೆಯನ್ನು ಸರಿಯಾದ ಸಮಯಕ್ಕೆ ಮಾಡಿಸಲಿಲ್ಲ. ಆರಂಭದಲ್ಲೇ ನಾನು ಅವಳನ್ನು ಅನುಭವವಿಲ್ಲದ ವೈದ್ಯರ ಬಳಿಗೆ ಕರೆದುಕೊಂಡು ಹೋದೆ, ಚರ್ಚ್‌ನ ಪಾದರಿಗಳಿಂದ ಮಂತ್ರ ಹಾಕಿಸಿದೆ, ಅಷ್ಟರಲ್ಲಿ ಅವರ ಕ್ಯಾನ್ಸರ್ ತುಂಬಾ ಹಬ್ಬಿತ್ತು' ಎಂದು ನನ್ನ ಮೇಲೆ ದೋಷವನ್ನು ಹೊರಿಸ್ತಾರೆ.'

'ಮನುಷ್ಯ ಸಿಟ್ಟಿನ ಭರದಲ್ಲಿ ಏನೇನೋ ಹೇಳ್ತಾನೆ. ಅದರೆ ಅದಕ್ಕೂ ಮನಸ್ಸಿಗೂ ಸಂಬಂಧವಿರುವುದಿಲ್ಲ. ನೀವು ಕುಂಜಮ್ಮಾರ ಬಳಿಗೆ ಅವಶ್ಯವಾಗಿ ಹೋಗಬೇಕಿತ್ತು...'

'ಸರಿ, ನಾಳೆ ಹೋಗ್ತೀನಿ...' ಅಪ್ಪ ವಾದವನ್ನು ನಿಲ್ಲಿಸುವ ಉದ್ದೇಶದಿಂದ ಹೇಳಿದರು.

'ನಿಮ್ಮ ಮನೆಗೆ ಬರಲಾಗಲಿಲ್ಲ ಎಂದು ಕ್ಷಮೆಯನ್ನೂ ಕೇಳಿಬಿಡಿ.'

'ಕ್ಷಮೆಯನ್ನೂ ಕೇಳ್ತೀನಿ... ಮತ್ತೇನಾದರೂ...?'

'ಅಮ್ಮಾಚನ್ ಟೋಸ್ಟನ್ನು ತುಂಬಾ ಇಷ್ಟಪಟ್ಟು ತಿನ್ನುವುದನ್ನು ನಾನು ನೋಡಿದೆ. ಅವರಿಗಾಗಿ ಬೇಕರಿಯಿಂದ ಟೋಸ್ಟನ್ನು ತೆಗೆದುಕೊಂಡು ಹೋಗಿ.'

'ಸರಿ, ಟೋಸ್ಟನ್ನೂ ತೆಗೆದುಕೊಂಡು ಹೋಗ್ತೀನಿ.'

ನಾನು ಅಡುಗೆ ಮಾಡಿದೆ. ಅಪ್ಪನೊಂದಿಗೆ ಕೂತು ಊಟ ಮಾಡಿದೆ. ಅಪ್ಪನ ಮೂಡ್ ಹಾಳಾಗಿತ್ತು ಎಂಬುದನ್ನು ಗಮನಿಸಿದೆ. ಅವರು ಗಂಭೀರವಾಗಿದ್ದು, ಮೌನಕ್ಕೆ ಶರಣಾಗಿದ್ದರು. ಬಹುಶಃ ಅವರು ಕುಂಜಮ್ಮಾರ ಪ್ರಸ್ತಾವದಿಂದ ವ್ಯಗ್ರರಾದರು. ಊಟವನ್ನು ನೆಪಮಾತ್ರಕ್ಕೆ ಮಾಡಿದರು. ಅವರು ನಿತ್ಯ ನನಗೆ ಡೈನಿಂಗ್ ಟೇಬಲ್ ಮೇಲೆ ಊಟಕ್ಕೆ ಸಿದ್ಧತೆ ಮಾಡಲು ಸಹಕರಿಸುತ್ತಿದ್ದರು. ಆದರೆ ಇಂದು ಮೌನವಾಗಿ ಕೂತಿದ್ದರು. ನಾನು ಕಿಚನ್‌ನಲ್ಲಿ ಒಂಟಿಯಾಗಿರುವುದನ್ನು ನೋಡಿ ಇಷ್ಟೇ ಕೇಳಿದರು,

'ನ್ಯಾನ್ಸಿ, ನಿನಗೇನಾದರೂ ಸಹಾಯ ಬೇಕಾ?'

'ಬೇಡ... ಎಲ್ಲಾ ಕೆಲಸವಾಯ್ತು, ಅಪ್ಪಾ' ಎಂದೆ ನಾನು.

ನಾನು ಕಿಚನ್‌ನಿಂದ ಹೊರ ಬಂದು ಕೈಗಳನ್ನು ಒರೆಸಿಕೊಂಡು ನನ್ನ ಬೆಡ್‌ರೂಮಿಗೆ ಹೋದೆ. ಅಪ್ಪ ಲಿವಿಂಗ್ ರೂಮಿನಲ್ಲಿ ಕೂತು ಟಿ.ವಿ. ನೋಡಲಾರಂಭಿಸಿದ್ದರು.

ನನಗೆ ನನ್ನ ಬೆಡ್‌ರೂಮ್ ತುಂಬಾ ಹಿಡಿಸುತ್ತಿತ್ತು, ಅಲ್ಲಿ ಗಾಳಿಬೆಳಕು ಚೆನ್ನಾಗಿ ಬರುತ್ತಿತ್ತು. ಅಲ್ಲಿ ಶಾಂತಿಯಿತ್ತು. ಕಿಟಕಿ ಹಿಂದಿದ್ದ ತೋಟ, ತೆಂಗಿನ ಮರಗಳು, ಹರಿಯುತ್ತಿದ್ದ ಚೆಲಿಯಾರ್ ನದಿ ಕಾಣಬರುತ್ತಿತ್ತು. ಮಂದವಾಗಿ ಗಾಳಿ ಬೀಸುತ್ತಿತ್ತು. ಮೇಜಿನ ಮೇಲೆ ನನ್ನ ಲ್ಯಾಪ್‌ಟಾಪ್ ಇರುತ್ತಿತ್ತು. ನಾನು ಲ್ಯಾಪ್‌ಟಾಪ್ ತೆರೆದು ಇಂಟರ್ನೆಟ್ ಹಾಕಿದಾಗ, ನಾನು ಇಡೀ ಜಗತ್ತಿನೊಂದಿಗೆ ಕಲೆತಿದ್ದೇನೆ ಎಂದು ಅನ್ನಿಸುತ್ತಿತ್ತು. ಆನ್‌ಲೈನಿನಲ್ಲಿ ಆಫ್ರಿಕಾ, ಡೆನ್ಮಾರ್ಕ್‌ಗೆ ಹೋಗುತ್ತಿದ್ದೆ. ನನ್ನ ಶಾಲೆಯ ಸ್ನೇಹಿತರೊಂದಿಗೆ ಚಾಟಿಂಗ್ ಮಾಡುತ್ತಿದ್ದೆ, ಮಗನೊಂದಿಗೆ ಸ್ಕೈಪ್ ಮಾಡುತ್ತಿದ್ದೆ.

ಗಡಿಯಾರ ನೋಡಿದೆ. ರಾತ್ರಿ ಒಂಬತ್ತು ಗಂಟೆಯಾಗಿತ್ತು. ಕೀನ್ಯಾದಲ್ಲಿ ಸಂಜೆಯ ಆರೂವರೆ ಆಗಿರಬಹುದು. ಇಂದು ಜೋಶ್‌ನೊಂದಿಗೆ ಸ್ಕೈಪ್‌ನಲ್ಲಿ ಮಾತನಾಡುವುದು ನಿಶ್ಚಿತವಾಗಿತ್ತು. ನಾನು ಸಂಜೆ ಆರೂವರೆಗೆ ನನ್ನ ಟ್ಯೂಶನ್ ಇತ್ಯಾದಿಗಳಿಂದ ಫ್ರೀಯಾಗುತ್ತೇನೆ, ಆಗ ನಾವಿಬ್ಬರು ಸ್ಕೈಪ್‌ನಲ್ಲಿ ಮಾತನಾಡೋಣ ಎಂದು ಅವನು ಮೆಸೇಜ್ ಕಳುಹಿಸಿದ್ದ. ಕಳೆದ ಒಂದು ತಿಂಗಳಿನಿಂದ ಅವನೊಂದಿಗೆ ಸ್ಕೈಪ್‌ನಲ್ಲಿ ಮಾತನಾಡಲು ಹಿಂಜರಿಯುತ್ತಿದ್ದೆ. ಏಕೆಂದರೆ ಅವನು ನನ್ನ ತಲೆಗೆ ಹಾಕಿದ್ದ ಬ್ಯಾಂಡೇಜ್ ಮತ್ತು ಮುಖದ ಮೇಲಿದ್ದ ಪರಚಿದ್ದ ಗುರುತುಗಳನ್ನು ನೋಡಿ, ಇದೆಲ್ಲಾ ಏನು ಎಂದು ಕೇಳಬಹುದು... ಹಾಗಂತ ಅವನಿಗೆ, ನಾನು ಅಕಸ್ಮಾತ್ ಕೇರಳಕ್ಕೆ ಹೋಗುತ್ತಿರುವ ಬಗ್ಗೆ ಹಾಗೂ ಮಮ್ಮಿ ಏಕೆ ತನ್ನೊಂದಿಗೆ ಮಾತನಾಡಲು ಹಿಂಜರಿಯುತ್ತಿದ್ದಾಳೆ ಎಂಬ ಬಗ್ಗೆ ಅನುಮಾನ ಬಂದಿತ್ತು.

ನಾನು ಲ್ಯಾಪ್‌ಟಾಪ್ ಆನ್ ಮಾಡಿದೆ. ಹಾಸಿಗೆಯಲ್ಲಿ ಕೂತು ಮಗನೊಂದಿಗೆ ಆನ್‌ಲೈನ್‌ನಲ್ಲಿ ಸ್ಕೈಪ್‌ನಲ್ಲಿ ಮಾತನಾಡುವುದು ನನಗೆ ಅತ್ಯಂತ ಸುಖದ ಕ್ಷಣಗಳಾಗಿದ್ದವು; ನನಗಾಗ ಸ್ವರ್ಗದ ಅನುಭವವಾಗುತ್ತಿತ್ತು. ಮನಸಾರೆ ಮಗನೊಂದಿಗೆ ಮಾತನಾಡುತ್ತಿದ್ದೆ.

ಗಂಟೆ ಹೊಡೆಯಿತು, ನಾನು ಹಸುರು ಆನ್ಸರ್ ಬಟನ್ ಮೇಲೆ ಕ್ಲಿಕ್ ಮಾಡಿದೆ. ಸ್ವಲ್ಪ ಹೊತ್ತಿಗೆ ಅವನ ಚಿತ್ರ ಸ್ಕ್ರೀನ್ ಮೇಲೆ ಮೂಡಿತು. ಮಗ ಯೌವನಕ್ಕೆ ಕಾಲಿಡುತ್ತಿದ್ದ. ಗಡ್ಡ–ಮೀಸೆ ಬರಲು ಆರಂಭವಾಗಿತ್ತು, ಧ್ವನಿಯಲ್ಲಿ ಗಡಸುತನ ಬಂದಿತ್ತು. ಜೋಶ್ ಹತ್ತನೆಯ ತರಗತಿಯಲ್ಲಿ ಉತ್ತೀರ್ಣನಾಗಿ ಹನ್ನೊಂದನೆ ತರಗತಿಗೆ ಬಂದಿದ್ದ... ನಾನು ನನ್ನ ಮುದ್ದು ಮಗನನ್ನು ವಿಭಿನ್ನ ಕೋನಗಳಿಂದ ನೋಡುತ್ತಿದ್ದೆ.

(ಸಶೇಷ)